
# ದೊರೆಯ ಕೃಪೆ ಮತ್ತು ಭಗವಂತನ ಕೃಪೆ


ತಮಿಳು ಮೂಲ : ಪರಮಹಂಸದಾಸ
ಕನ್ನಡಕ್ಕೆ : ಸ್ವಾಮಿ ರಾಘವೇಶಾನಂದ
ಚಿತ್ರ : ಶಂಕರ್


ಒಂದನೊಂದು ಕಾಲದಲ್ಲಿ ಸುಂದರವದನನೆಂಬ ರಾಜ ಕನ್ನಪುರಿಯನ್ನು ಆಳುತ್ತಿದ್ದನು. ಅವನು ಎಲ್ಲ ರೀತಿಯಲ್ಲಿಯೂ ಏಳಿಗೆ ಹೊಂದಿದ್ದನು. ಆದರೆ ದೇವರನ್ನು ನಂಬುತ್ತಿರಲಿಲ್ಲ.

ಒಂದು ರಾತ್ರಿ ಅವನು ತನ್ನ ಮಂತ್ರಿಯೊಂದಿಗೆ ಛದ್ಮವೇಷದಲ್ಲಿ ನಗರ ಸಂಚಾರ ಮಾಡಲು ಹೋದನು. ದಾರಿಯಲ್ಲಿ ಇಬ್ಬರು ಭಿಕ್ಷುಕರು ಭಿಕ್ಷೆ ಬೇಡುತ್ತಿರುವುದನ್ನು ನೋಡಿದನು. ಅವರು ಗಟ್ಟಿಯಾದ ಧ್ವನಿಯಿಂದ ಭಿಕ್ಷೆ ಕೇಳುತ್ತಿದ್ದರು.





ಮಾರನೆಯ ದಿನ ಈ ಭಿಕ್ಷುಕರನ್ನು ಮಂತ್ರಿ ಬರಮಾಡಿಕೊಂಡನು.








ಮಂತ್ರಿಯು ಇನ್ನೊಬ್ಬ ಭಿಕ್ಷುಕನನ್ನು ಕೇಳಿದನು.





ಅಂದು ರಾತ್ರಿ ರಾಜ ಮಲಗಲು ಹೋಗುವ ಸಮಯದಲ್ಲಿ....
ಮಂತ್ರಿ, 'ರಾಜನ ಕೃಪೆ' ಎಂದು ಕೂಗುತ್ತಿದ್ದ ಭಿಕ್ಷುಕ ಹೆಚ್ಚು ಬುದ್ಧಿವಂತ.
ಸಹಾಯ ಮಾಡಲು ಒಬ್ಬ ಎಷ್ಟೇ ಪ್ರಯತ್ನಿಸಿದರೂ, ಪಡೆಯುವವನ ಮೇಲೆ ಭಗವಂತನ ಕೃಪೆ ಇರದಿದ್ದರೆ ಅದೆಂದಿಗೂ ಅವನನ್ನು ಸೇರದು.
ಆಗಲಿ, ಯಾರ ಕೃಪೆ ಹೆಚ್ಚೆಂದು ಪರೀಕ್ಷಿಸೋಣ.
5
ಮರುದಿನ ರಾಜನ ಆಣತಿಯನ್ನು ಸಾರಲಾಯಿತು.
ಮುಂದಿನ ರಾಮನವಮಿಯಂದು ರಾಜನು ಎಲ್ಲರಿಗೂ ಬಹುಮಾನಗಳನ್ನು ಕೊಡುವನು. ಎಲ್ಲರೂ ರಾಜನ ಆಸ್ಥಾನಕ್ಕೆ ಬಂದು ಸ್ವೀಕರಿಸಬಹುದು.
6
ಅದರಂತೆ ಜನರು ಸಾಲಾಗಿ ಬಂದು ಬಹುಮಾನಗಳನ್ನು ಸ್ವೀಕರಿಸಿದರು.
7
ಒಂದು ಹೊಸ ಬಟ್ಟೆ ಮತ್ತು ಕುಂಬಳಕಾಯಿ.
ಈ ಇಬ್ಬರು ಭಿಕ್ಷುಕರೂ ಕೂಡ ಅಲ್ಲಿ ಇದ್ದರು. 'ರಾಜನ ದಯೆ' ಎಂದು ಹೇಳುತ್ತಿದ್ದ ಭಿಕ್ಷುಕ ರಾಜನ ಹತ್ತಿರ ಹೋದಾಗ......
8
ಓ! ರಾಜನ ಕೃಪೆಯಲ್ಲಿ ನಂಬಿಕೆ ಇಟ್ಟವನು ನೀನಲ್ಲವೆ?
ಹೌದು ಸ್ವಾಮಿ.
ರಾಜನು ಮಂತ್ರಿಯ ಕಡೆ ನೋಡುತ್ತಾ ನಸುನಕ್ಕು ಮಂತ್ರಿಯ ಕಿವಿಯಲ್ಲಿ ಏನೋ ಹೇಳಿದನು. ಮಂತ್ರಿ ಒಳಗೆ ಹೋಗಿ ಒಂದು ಕುಂಬಳಕಾಯಿ ತಂದು ರಾಜನ ಕೈಯಲ್ಲಿಟ್ಟನು.
9
ಇದನ್ನು ಇಟ್ಟುಕೊ. ನೀನು ಜೀವನದಲ್ಲಿ ಮೇಲೆ ಬರುವೆ.



ಕೆಲವು ದಿನಗಳ ನಂತರ ರಾಜ ಮತ್ತು ಮಂತ್ರಿ ಮತ್ತೆ ವೇಷ ಮರೆಸಿಕೊಂಡು ನಗರ ಸಂಚಾರಕ್ಕೆ ಹೊರಟರು. ಅಲ್ಲಿ ಮತ್ತೆ 'ರಾಜನ ಕೃಪೆ' ಎಂದು ಹೇಳುತ್ತಿದ್ದ ಭಿಕ್ಷುಕನನ್ನು ಕಂಡು ಅವಾಕ್ಕಾದರು.
10
ಓ ತಾಯಿ! ಸ್ವಲ್ಪ ಭಿಕ್ಷೆ ನೀಡು. ಎರಡು ದಿನಗಳಿಂದ ನಾನು ಹಸಿದಿರುವೆ.
ಮಾರನೆಯ ದಿನ ಈ ಭಿಕ್ಷುಕನನ್ನು ರಾಜನು ಆಸ್ಥಾನಕ್ಕೆ ಮತ್ತೆ ಕರೆಸಿಕೊಂಡನು.
11
ಏನು! ನನ್ನಿಂದ ಕುಂಬಳಕಾಯಿ ಪಡೆದ ಮೇಲೆಯೂ ನೀನು ಭಿಕ್ಷೆ ಬೇಡುವುದನ್ನು ಮುಂದುವರಿಸುತ್ತಿದ್ದೀಯಲ್ಲಾ?
ಓ, ರಾಜ! ಆ ಕುಂಬಳಕಾಯಿಯನ್ನು ಸಂತೆಯಲ್ಲಿ ಮಾರಿದೆ. ಎರಡು ಬೆಳ್ಳಿಯ ನಾಣ್ಯಗಳು ದೊರೆತವು. ಅಷ್ಟರಿಂದ ನಾನು ಶ್ರೀಮಂತನಾಗಲು ಹೇಗೆ ಸಾಧ್ಯ?
ಅಯ್ಯೋ ಮುಠ್ಠಾಳ! ಅದು ಸಾಧಾರಣವಾದ ಕುಂಬಳಕಾಯಿ ಅಲ್ಲ. ಮುತ್ತು ರತ್ನಗಳು ಅದರಲ್ಲಿ ಅಡಗಿದ್ದವು. ನೀನು ಅದನ್ನು ಕತ್ತರಿಸಿದ್ದರೆ, ನಗರದ ಅತಿ ದೊಡ್ಡ ಶ್ರೀಮಂತನಾಗುತ್ತಿದ್ದೆ.
ಕೆಲ ಕಾಲದ ನಂತರ ಅವರು ಮತ್ತೆ ನಗರಕ್ಕೆ ಹೋದಾಗ ಪಲ್ಲಕ್ಕಿಯಲ್ಲಿ ಕುಳಿತ ಒಬ್ಬ ಶ್ರೀಮಂತನನ್ನು ನೋಡಿದರು.
12
ಸ್ವಾಮಿ ಪಲ್ಲಕ್ಕಿಯಲ್ಲಿ ಕುಳಿತ ಆತನೇ 'ರಾಮನ ಕೃಪೆ' ಎಂದು ಹೇಳುತ್ತಿದ್ದವನು.
ಹೌದೇನು? ನಾಳೆ ಅವನನ್ನು ಆಸ್ಥಾನಕ್ಕೆ ಬರಮಾಡು.
ಮಾರನೆಯ ದಿನ ಅರಮನೆಯಲ್ಲಿ
13
'ರಾಮನ ಕೃಪೆ' ಎಂದು ಹೇಳುತ್ತಿದ್ದ ಭಿಕ್ಷುಕ ನೀನೇ ಅಲ್ಲವೆ? ನೀನು ಶ್ರೀಮಂತನಾದ ಬಗೆ ಹೇಗೆ?
ಮಹಾರಾಜ, ಅದೆಲ್ಲಾ ರಾಮನ ಅನುಗ್ರಹ. ಒಂದು ದಿನ, ಗತಿಸಿದ ನನ್ನ ತಂದೆಯ ತೃಪ್ತಿಗಾಗಿ ಬ್ರಾಹ್ಮಣರಿಗೆ ಊಟ ಹಾಕಬೇಕಾಗಿತ್ತು. ನನಗೆ ಒಂದು ಕುಂಬಳಕಾಯಿಯನ್ನು ಕೊಂಡುಕೊಳ್ಳಲು ಮಾತ್ರ ಸಾಧ್ಯವಿತ್ತು. ಅದನ್ನು ಹೋಳು ಮಾಡಿದಾಗ, ಆಶ್ಚರ್ಯ, ಅದರಲ್ಲಿ ಮುತ್ತು ರತ್ನಗಳು ಇದ್ದವು. ರಾಮನ ದಯೆಯಿಂದ ನಾನು ಶ್ರೀಮಂತನಾದೆ.
14
ಮಂತ್ರಿ ಹೇಳಿದ್ದೇ ನಿಜ. ಭಗವಂತನ ಕೃಪೆಯಿಂದ ಮಾತ್ರವೇ ಜನರು ಉನ್ನತಿಗೇರಲು ಸಾಧ್ಯ.